[Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1374/2019**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 6

ಸಾಕ್ಷಿದಾರನ ಹೆಸರು : ಯಶೋಧರ ದೇವಾಡಿಗ

ತಂದೆಯ ಹೆಸರು : ತೋಮರ ದೇವಾಡಿಗ

ಪ್ರಾಯ : 48 ವರ್ಷ

ಉದ್ಯೋಗ : ಕೃಷಿ

ವಾಸ : ಬಜಗೋಳಿ

ದಿನಾಂಕ 05-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನನಗೆ ಆರೋಪಿಯ ಪರಿಚಯವಿರುವುದಿಲ್ಲ.

ನನ್ನ ಸಮಕ್ಷಮ ಪೋಲೀಸರು ಆರೋಪಿ ದಸ್ತಗಿರಿ ಮತ್ತು ಸೊತ್ತು ಸ್ವಾಧೀನತಾ ಮಹಜರು ಮಾಡಿರುವುದಿಲ್ಲ. ಸಾಕ್ಷಿಯು ಸದ್ರಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸ್ಸಿದ್ದು, ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಎಲ್ಲಿ, ಯಾವಾಗ, ಯಾವ ಉದ್ದೇಶಕ್ಕಾಗಿ ಮಾಡಿರುತ್ತೇನೆ ಎಂದು ನೆನಪಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 48 ನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿಃ 23-02-2019 ರಂದು ಪೋಲಿಸರು ಕಾರ್ಕಳ ತಾಲೂಕು ಕಸಬಾ ಗ್ರಾಮದ ಹಳೆ ಉಡುಪಿ ಬಸ್ಸು ನಿಲ್ದಾಣದ ಬಳಿ ಕಾರ್ಲ ಕಾಂಪ್ಲೆಕ್ಸ್ ಕಟ್ಟಡದಲ್ಲಿರುವ ವಿಜಯಾ ವೈನ್ಸ್ ಶಾಪ್ ಬಳಿಯ ಹೋಟೇಲ್ ನಲ್ಲಿ ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಸಂಜೆ 4.30 ರಿಂದ 6.30 ರವರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯನ್ನು ಹಾಗೂ ನ್ಯಾಯಾಲಯ ಮುಂದಿರುವ ಮು.ಮಾ-1 ರಿಂದ 48 ಸೊತ್ತುಗಳನ್ನು ಆರೋಪಿ ದಸ್ತಗಿರಿ ಮತ್ತು ಸೊತ್ತು ಸ್ವಾಧೀನತಾ ಮಹಜರು ಮುಖೇನ ವಶಪಡಿಸಿಕೊಂಡಿರುತ್ತಾರೆ ಹಾಗೂ ಸ್ಥಳದಲ್ಲಿಯೇ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಬಿ.ಎಮ್.ಎಸ್. ವಕೀಲರಿಂದ ಃ ಏನೂ ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ